ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೦ Volume - 160	ಬೆಂಗಳೂರು, ಗುರುವಾರ ೧೧, ಡಿಸೆಂಬರ್, ೨೦೨೫ (ಮಾರ್ಗಶಿರ, ೨೦, ಶಕವರ್ಷ, ೧೯೪೭) BENGALURU, THURSDAY 11, DECEMBER, 2025 (MARGASHIRA, 20, SHAKAVARSHA, 1947)	ಸಂಚಿಕೆ ೨೩೭ Issue 237

ಭಾಗ ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ವೀರಭದ್ರಗೌಡ ಶೇಖರಗೌಡ ಕಟ್ಟಿ, ವಕೀಲರು ಮತ್ತು ನೋಟರಿ, ಕೊಪ್ಪಳ ಕಂದಾಯ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರ ಹೆಸರನ್ನು ನೋಟರಿಗಳ ಪಟ್ಟಿಯಿಂದ ತೆಗೆಯುವ ಬಗ್ಗೆ.

ಓದಲಾಗಿದೆ:- (1) ಸರ್ಕಾರದ ಆದೇಶ ಸಂಖ್ಯೆ :ಲಾ 211 ಎಲ್‌ಸಿಎಲ್ 2005, ದಿನಾಂಕ :28-06-2006.

(2) ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೊಪ್ಪಳ ಜಿಲ್ಲೆ ಇವರ ಕಛೇರಿ ಪತ್ರ ಸಂಖ್ಯೆ: 1997/ಆಡಳಿತ/ನೋಟರಿ/2025, ದಿನಾಂಕ : 17.10.2025.

* * * * *

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ : 28.06.2006ರ ಆದೇಶದಲ್ಲಿ ಶ್ರೀ ವೀರಭದ್ರಗೌಡ ಶೇಖರಗೌಡ ಕಟ್ಟಿ, ವಕೀಲರು ಇವರನ್ನು ಕೊಪ್ಪಳ ಜಿಲ್ಲೆಯ ಕೊಪ್ಪಳ ಕಂದಾಯ ತಾಲ್ಲೂಕಿಗೆ ನೋಟರಿಯನ್ನಾಗಿ ನೇಮಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ಪತ್ರದಲ್ಲಿ ಶ್ರೀ ವೀರಭದ್ರಗೌಡ ಶೇಖರಗೌಡ ಕಟ್ಟಿ, ವಕೀಲರು ಮತ್ತು ನೋಟರಿ ಇವರು ದಿನಾಂಕ : 14.09.2025ರಂದು ಮರಣ ಹೊಂದಿದ್ದು, ಸದರಿಯವರಿಗೆ ಈ ಹಿಂದೆ ಸರ್ಕಾರದಿಂದ ವಿತರಿಸಿದ ದಿನಾಂಕ : 01.01.2022ರ ನೋಟರಿ ವೃತ್ತಿ ಪ್ರಮಾಣ ಪತ್ರ ಸಂಖ್ಯೆ: ಲಾ-ಎಲ್‌ಸಿಎಲ್/109/2021ರ ಮೂಲ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸುತ್ತಾ, ಮುಂದಿನ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೊಪ್ಪಳ ಜಿಲ್ಲೆ ಇವರು ಸಲ್ಲಿಸಿರುವ ಪತ್ರ ಮತ್ತು ದಾಖಲೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲಾ-ಎಲ್‌ಸಿಎಲ್/283/2025,
ಬೆಂಗಳೂರು, ದಿನಾಂಕ : 27-11-2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ವೀರಭದ್ರಗೌಡ ಶೇಖರಗೌಡ ಕಟ್ಟಿ, ವಕೀಲರು ಮತ್ತು ನೋಟರಿ, **ಕೊಪ್ಪಳ ಕಂದಾಯ ತಾಲ್ಲೂಕು, ಕೊಪ್ಪಳ ಜಿಲ್ಲೆ** ಇವರು ದಿನಾಂಕ : 14.09.2025 ರಂದು ನಿಧನ ಹೊಂದಿರುವುದರಿಂದ ಸದರಿಯವರ ಹೆಸರನ್ನು ನೋಟರಿ ರಿಜಿಸ್ಟರ್‌ನಿಂದ ಶಾಶ್ವತವಾಗಿ ತೆಗೆದುಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಆದಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು, ನ್ಯಾಯ ಮತ್ತು
ಮಾನವ ಹಕ್ಕುಗಳ ಇಲಾಖೆ (ಆಡಳಿತ-2).

PR-295

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಧಾರವಾಡ ಜಿಲ್ಲೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸದೇ ಇರುವ ರಾಜ್ಯ ನೋಟರಿಗಳ ಹೆಸರನ್ನು ನೋಟರಿಗಳ ಪಟ್ಟಿಯಿಂದ ತೆಗೆಯುವ ಬಗ್ಗೆ.

ಓದಲಾಗಿದೆ: - (1) ಸರ್ಕಾರದ ಪತ್ರ ಸಂಖ್ಯೆ: ಲಾ-ಎಲ್‌ಸಿಎಲ್/134/2023, ದಿನಾಂಕ : 02-08-2023 ಮತ್ತು 22-04-2025.
(2) ಅಧ್ಯಕ್ಷರು, ಧಾರವಾಡ ವಕೀಲರ ಸಂಘ (ರಿ), ಧಾರವಾಡ ಜಿಲ್ಲೆ ಇವರ ಕಛೇರಿಯ ದಿನಾಂಕ : 26-03-2025 ಮತ್ತು 06-05-2025ರ ಪತ್ರಗಳು

* * * * *

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ಪತ್ರಗಳಲ್ಲಿ ಹುಬ್ಬಳ್ಳಿ – ಧಾರವಾಡ ಕಂದಾಯ ತಾಲ್ಲೂಕಿಗೆ ಹೆಚ್ಚುವರಿ ನೋಟರಿ ನೇಮಕ ಮಾಡುವ ಬಗ್ಗೆ ಪರಿಶೀಲಿಸಲು ರಾಜ್ಯ ಸರ್ಕಾರದಿಂದ ಧಾರವಾಡ ಜಿಲ್ಲೆಯ ವಿವಿಧ ಕಂದಾಯ ತಾಲ್ಲೂಕಿಗೆ ನೇಮಿಸಲ್ಪಟ್ಟು ನೋಟರಿಗಳು ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಹಾಗೂ ನೋಟರಿಯಾಗಿ ನೇಮಕಾತಿಗೊಂಡು ಕಾರ್ಯನಿರ್ವಹಿಸದೇ ಇರುವ ನೋಟರಿಗಳ (ನಿಧನ, ರಾಜೀನಾಮೆ, ಅಮಾನತ್ತು) ಮಾಹಿತಿಯನ್ನು ಒದಗಿಸುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಧಾರವಾಡ ಜಿಲ್ಲೆ ಹಾಗೂ ಧಾರವಾಡ ವಕೀಲರ ಸಂಘಕ್ಕೆ ಪತ್ರ ಬರೆಯಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರ ದಿನಾಂಕ : 26-03-2025 ಮತ್ತು ದಿನಾಂಕ : 06-05-2025ರ ಪತ್ರಗಳಲ್ಲಿ ರಾಜ್ಯ ಸರ್ಕಾರದಿಂದ ನೇಮಕಗೊಂಡ ಈ ಕೆಳಕಂಡ ನೋಟರಿಗಳು ನೋಟರಿ ವೃತ್ತಿ ನಿರ್ವಹಿಸದೇ ಇರುವ ಬಗ್ಗೆ ಅಧ್ಯಕ್ಷರು, ಧಾರವಾಡ ವಕೀಲರ ಸಂಘ (ರಿ), ಧಾರವಾಡ ಜಿಲ್ಲೆ ಇವರು ಸರ್ಕಾರಕ್ಕೆ ಮಾಹಿತಿ ಸಲ್ಲಿಸಿರುತ್ತಾರೆ.

ಕ್ರ. ಸಂ.	ನೋಟರಿಯ ಹೆಸರು	ಕಂದಾಯ ತಾಲ್ಲೂಕು	ನೇಮಕಾತಿ ಹೊಂದಿದ ಆದೇಶ & ದಿನಾಂಕ
1	ಬಾಲರಾಜ ಗಂಗಾಧರ ದಂಡಿನ್	ಹುಬ್ಬಳ್ಳಿ-ಧಾರವಾಡ	ಲಾ 120 ಎಲ್‌ಸಿಎಲ್ 2000, ದಿ: 16-10-2000

2	ಜಯವಾಡಗಿ ಪ್ರಕಾಶ್ ಸಿದ್ದನಗೌಡ	ಹುಬ್ಬಳ್ಳಿ-ಧಾರವಾಡ	ಲಾ 166 ಎಲ್‌ಸಿಎಲ್ 2000, ದಿ: 23-04-2001
3	ವಿ. ಆರ್. ಕುಲಕರ್ಣಿ	ಹುಬ್ಬಳ್ಳಿ-ಧಾರವಾಡ	ಲಾ 44 ಎಲ್‌ಸಿಎಲ್ 1996, ದಿ: 18-03-1996
4	ಬುಳ್ಳ ಬಾಲಚಂದ್ರ ವಿರೂಪಾಕ್ಷಪ್ಪ	ಹುಬ್ಬಳ್ಳಿ-ಧಾರವಾಡ	ಲಾ 51 ಎಲ್‌ಸಿಎಲ್ 2004, ದಿ: 19-11-2005

ಅಧ್ಯಕ್ಷರು, ಧಾರವಾಡ ವಕೀಲರ ಸಂಘ (ರಿ), ಧಾರವಾಡ ಜಿಲ್ಲೆ ಇವರು ಸಲ್ಲಿಸಿರುವ ಪತ್ರ ಮತ್ತು ದಾಖಲೆಯನ್ನು ನೋಟರಿಗಳ ಕಾಯ್ದೆ 1952ರ ಸೆಕ್ಷನ್ 10(f) ರನ್ವಯ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲಾ-ಎಲ್‌ಸಿಎಲ್/134/2023,
ಬೆಂಗಳೂರು, ದಿನಾಂಕ : 01-12-2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಧಾರವಾಡ ಜಿಲ್ಲೆ ವ್ಯಾಪ್ತಿಯ ರಾಜ್ಯ ಸರ್ಕಾರದಿಂದ ನೇಮಕಗೊಂಡ ಈ ಕೆಳಕಂಡ ನೋಟರಿಗಳು ನೋಟರಿ ವೃತ್ತಿ ನಿರ್ವಹಿಸದೇ ಇರುವುದರಿಂದ ಹಾಗೂ ಸದರಿ ನೋಟರಿಗಳು ವೃತ್ತಿ ಪ್ರಮಾಣ ಪತ್ರ ನವೀಕರಿಸಿಕೊಳ್ಳದೇ ಇರುವುದರಿಂದ ನೋಟರಿಗಳ ಕಾಯ್ದೆ, 1952ರ ಸೆಕ್ಷನ್ 10 (f) ರನ್ವಯ ಅವರುಗಳ ಹೆಸರನ್ನು ನೋಟರಿ ರಿಜಿಸ್ಟರ್‌ನಿಂದ ಶಾಶ್ವತವಾಗಿ ತೆಗೆದುಹಾಕಲಾಗಿದೆ.

ಕ್ರ. ಸಂ.	ನೋಟರಿಯ ಹೆಸರು	ಕಂದಾಯ ತಾಲ್ಲೂಕು	ನೇಮಕಾತಿ ಹೊಂದಿದ ಆದೇಶ & ದಿನಾಂಕ
1	ಬಾಲರಾಜ ಗಂಗಾಧರ ದಂಡಿನ್	ಹುಬ್ಬಳ್ಳಿ-ಧಾರವಾಡ	ಲಾ 120 ಎಲ್‌ಸಿಎಲ್ 2000, ದಿ: 16-10-2000
2	ಜಯವಾಡಗಿ ಪ್ರಕಾಶ್ ಸಿದ್ದನಗೌಡ	ಹುಬ್ಬಳ್ಳಿ-ಧಾರವಾಡ	ಲಾ 166 ಎಲ್‌ಸಿಎಲ್ 2000, ದಿ: 23-04-2001
3	ವಿ. ಆರ್. ಕುಲಕರ್ಣಿ	ಹುಬ್ಬಳ್ಳಿ-ಧಾರವಾಡ	ಲಾ 44 ಎಲ್‌ಸಿಎಲ್ 1996, ದಿ: 18-03-1996
4	ಬುಳ್ಳ ಬಾಲಚಂದ್ರ ವಿರೂಪಾಕ್ಷಪ್ಪ	ಹುಬ್ಬಳ್ಳಿ-ಧಾರವಾಡ	ಲಾ 51 ಎಲ್‌ಸಿಎಲ್ 2004, ದಿ: 19-11-2005

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಆದಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು, ನ್ಯಾಯ ಮತ್ತು
ಮಾನವ ಹಕ್ಕುಗಳ ಇಲಾಖೆ (ಆಡಳಿತ-2).

PR-296

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಬೆಳಗಾವಿ ಜಿಲ್ಲೆಯ ಮೂಡಲಗಿ ಕಂದಾಯ ತಾಲ್ಲೂಕಿಗೆ ಹೊಸದಾಗಿ ಎರಡು (02) ನೋಟರಿ ಹುದ್ದೆಗಳನ್ನು ಸೃಜಿಸುವ ಬಗ್ಗೆ.

ಓದಲಾಗಿದೆ:

1. ಅಧ್ಯಕ್ಷರು, ಮೂಡಲಗಿ ವಕೀಲರ ಸಂಘ (ರಿ), ಬೆಳಗಾವಿ ಜಿಲ್ಲೆ ರವರ ಮನವಿ ದಿನಾಂಕ : 15-07-2024.
2. ಸರ್ಕಾರದ ಪತ್ರ ಸಂಖ್ಯೆ: ಲಾ-ಎಲ್‌ಸಿಎಲ್/165/2024, ದಿನಾಂಕ : 09-08-2024.
3. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ ಜಿಲ್ಲೆ ರವರ ಕಛೇರಿ ಪತ್ರ ಸಂಖ್ಯೆ: ಆರ್‌ಕೆ/15805/2024, ದಿನಾಂಕ : 13-09-2024.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ದಿನಾಂಕ : 15-07-2024ರ ಮನವಿಯಲ್ಲಿ ಮೂಡಲಗಿ ನ್ಯಾಯಾಲಯವು ಸನ್ 2012ರಿಂದ ಕಾರ್ಯನಿರ್ವಹಿಸುತ್ತಿದ್ದು, 48 ಹಳ್ಳಿಗಳನ್ನು ಒಳಗೊಂಡು ಹೊಸ ಕಂದಾಯ ತಾಲ್ಲೂಕು ಅಂತಾ ಘೋಷಣೆಯಾಗಿದ್ದು ಹಾಗೂ ಹೊಸ ತಾಲ್ಲೂಕು ಘೋಷಣೆಗಾಗಿ 6 ವರ್ಷಗಳ ಕಾಲ ಪೂರ್ಣಗೊಂಡಿದ್ದು ಹೀಗಿದ್ದೂ ಸಹ ಮೂಡಲಗಿಯಲ್ಲಿ ರಾಜ್ಯ ಸರ್ಕಾರದಿಂದ ಯಾವುದೇ ನೋಟರಿ ಇರುವುದಿಲ್ಲವೆಂದು, ಸಾರ್ವಜನಿಕರ ಹಾಗೂ ವಕೀಲರ ನ್ಯಾಯದ ದೃಷ್ಟಿಯಿಂದ ಮೂಡಲಗಿ ತಾಲ್ಲೂಕಿಗೆ ಹೊಸ ನೋಟರಿ ಹುದ್ದೆಗಳನ್ನು ಸೃಷ್ಟಿಸಿ ನೇಮಕಾತಿ ಮಾಡಬೇಕಾಗಿ ವಿನಂತಿ ಮಾಡಿಕೊಂಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ಪತ್ರದಲ್ಲಿ ಬೆಳಗಾವಿ ಜಿಲ್ಲೆಯ ಮೂಡಲಗಿ ಕಂದಾಯ ತಾಲ್ಲೂಕಿಗೆ ಹೊಸದಾಗಿ ನೋಟರಿ ಹುದ್ದೆ ಸೃಜಿಸುವ ಅವಶ್ಯಕತೆ ಇರುವ ಬಗ್ಗೆ ಪರಿಶೀಲಿಸಿ, ಸ್ಪಷ್ಟ ಅಭಿಪ್ರಾಯವನ್ನು ತಿಳಿಸುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ ಜಿಲ್ಲೆ ಇವರನ್ನು ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ದಿನಾಂಕ : 04-09-2024ರ ಪತ್ರದಲ್ಲಿ ಬೆಳಗಾವಿ ಜಿಲ್ಲೆಯ ಮೂಡಲಗಿ ಕಂದಾಯ ತಾಲ್ಲೂಕಿನಲ್ಲಿ ಯಾವುದೇ ನೋಟರಿ ಹುದ್ದೆ ಸೃಷ್ಟಿಯಾಗದೇ ಇರುವುದರಿಂದ ಪಕ್ಷಗಾರರಿಗೆ ತುಂಬಾ ತೊಂದರೆಯಾಗುತ್ತಿದೆ. ಅಲ್ಲದೇ ಮೂಡಲಗಿ ಕಂದಾಯ ತಾಲ್ಲೂಕಿನಲ್ಲಿ 48 ಹಳ್ಳಿಗಳು ಬರುತ್ತಿದ್ದು ಹಾಗೂ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ ಮೂಡಲಗಿಯಲ್ಲಿ ದಿವಾಣಿ ಪ್ರಕರಣಗಳು, ಸಿವಿಲ್-1021 ಹಾಗೂ ಕ್ರಿಮಿನಲ್ ಪ್ರಕರಣಗಳು – 2047 ಒಟ್ಟು 3,068 ಪ್ರಕರಣಗಳು ಬಾಕಿ ಇದ್ದು, ಈ ಕಂದಾಯ ತಾಲ್ಲೂಕಿಗೆ ನೋಟರಿಗಳ ಹುದ್ದೆ ಸೃಜಿಸುವುದು ಅತಿ ಅವಶ್ಯಕವಾಗಿರುತ್ತದೆಂದು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ ಜಿಲ್ಲೆ ಇವರು ಅಭಿಪ್ರಾಯ ತಿಳಿಸಿರುತ್ತಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ ಜಿಲ್ಲೆ ಇವರ ಅಭಿಪ್ರಾಯದನ್ವಯ, ಸಾರ್ವಜನಿಕ ಹಿತಾಸಕ್ತಿ ಹಾಗೂ ಆಡಳಿತ ಹಿತದೃಷ್ಟಿಯಿಂದ ನೋಟರಿಗಳ ನಿಯಮಗಳು, 1956ರ ನಿಯಮ 8(4A) ರನ್ವಯ ಹೊಸದಾಗಿ ನೋಟರಿ ಹುದ್ದೆಗಳನ್ನು ಸೃಜಿಸುವ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲಾ - ಎಲ್‌ಸಿಎಲ್/165/2024,
ಬೆಂಗಳೂರು, ದಿನಾಂಕ : 04-12-2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೆಳಗಾವಿ ಜಿಲ್ಲೆಯ **ಮೂಡಲಗಿ ಕಂದಾಯ ತಾಲ್ಲೂಕಿಗೆ** ಹೊಸದಾಗಿ **ಎರಡು (02) ನೋಟರಿ ಹುದ್ದೆಗಳನ್ನು** ಸೃಜಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಆದಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು, ನ್ಯಾಯ ಮತ್ತು
ಮಾನವ ಹಕ್ಕುಗಳ ಇಲಾಖೆ (ಆಡಳಿತ-2).

PR-297

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH